**ಸಾಕ್ಷಿಯನ್ನು ದಿಃ 28.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎಸ್.ಎಸ್.ಜಿ ವಕೀಲರಿಂದಃ-**

ನಾನು ಪಿ.ಯು.ಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ತೋಟದ ಮನೆಯಲ್ಲಿ ಇರುವುದು ಎಂದರೆ ಸರಿ. 2 ನೇ ಎದುರುದಾರರು ಡ್ರೀಮ್ ಲ್ಯಾಂಡ್ ಲೇ- ಔಟ್ ನಲ್ಲಿ ಇರುತ್ತಾರೆ. ನಮ್ಮ ತೋಟದ ಮನೆಯಿಂದ ಡ್ರೀಮ್ ಲ್ಯಾಂಡ್ ಲೇ- ಔಟ್ 1 ಕಿ.ಮೀ ಅಂತರ ಇದೆ ಎಂದರೆ ಸರಿ. 2 ನೇ ಎದುರುದಾರರು 15 ರಿಂದ 20 ವರ್ಷಗಳಿಂದ ಡ್ರೀಮ್ ಲ್ಯಾಂಡ್ ಪಕ್ಕದಲ್ಲಿ ಇದ್ದಾರೆ ಎಂದರೆ ಸರಿಯಲ್ಲ, 15 ವರ್ಷಗಳಿಂದ ಇರುತ್ತಾರೆ. ಈ ಕೇಸ್ ಅನ್ನು 2020 ರ ಮೇಲೆ ಹಾಕಿರುತ್ತೇನೆ ಎಂದರೆ ಸರಿ. 2 ನೇ ಎದುರುದಾರರು ತೋಟದ ಮನೆಯಲ್ಲಿ ಅಂದರೆ ನಮ್ಮ ಜೊತೆ ವಾಸ ಇದ್ದರು ಎಂದು ತೋರಿಸಲು ಯಾವುದೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಏನು ದಾಖಲೆ ಹಾಜರು ಪಡಿಸಿದ್ದಿರಿ ಎಂದರೆ ಹಕ್ಕು ಖುಲಾಸೆ ಪತ್ರ ಹಾಜರು ಪಡಿಸಿದ್ದೇನೆ ಎನ್ನುತ್ತಾರೆ. ಹಕ್ಕು ಖುಲಾಸೆ ಪತ್ರದ ದಿಃ 2016 ಏಪ್ರೀಲ್ ತಿಂಗಳು ಆಗಿರುತ್ತದೆ. ನಾನು ಅರ್ಜಿ ಸಲ್ಲಿಸುವ 4 ವರ್ಷದ ಹಿಂದಕ್ಕೆ 2016 ಎಂದರೆ ಸರಿ. 2016 ರಿಂದಲೂ ನನಗೆ ಕಿರುಕುಳ ಆಗುತ್ತಿತ್ತು ಎಂದು ಅರ್ಜಿಯಲ್ಲಿ ಬರೆದಿಲ್ಲ ಎಂದರೆ ಸರಿ. ಸದರಿ ವಿಷಯವನ್ನು ಈ ಕೇಸ್ ನ ಸಂಬಂಧ ಇದೆ ಮೊದಲ ಬಾರಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಈ ಕೇಸ್ ಹಾಕುವ ಪೂರ್ವದಲ್ಲಿ ಸಿ.ಡಿ.ಪಿ.ಓ ಗೆ ಒಂದು ಅರ್ಜಿ ಕೊಟ್ಟಿದ್ದೆ ಎಂದರೆ ಸರಿ, ಸದರಿ ಅರ್ಜಿಯಲ್ಲಿ ಯಾವುದೆ ಸತ್ಯಾಂಶ ಇಲ್ಲ ಎಂದು ಅರ್ಜಿ ಅಲ್ಲಿಗೆ ಮುಗಿದು ಹೋಗಿತ್ತು ಎಂದರೆ ಸರಿಯಲ್ಲ. ಈ ಕೇಸ್ ನಲ್ಲಿ ಸಿ.ಡಿ.ಪಿ.ಓ ವರದಿಯನ್ನು ಸಲ್ಲಿಸಿರುತ್ತೇನೆ. ಅಂತಹ ಸಿ.ಡಿ.ಪಿ.ಓ ವರದಿ ಇಲ್ಲ ಎಂದರೆ ಅವರ ಮೂಲಕವೆ ಈ ಕೇಸು ಹಾಕಲಾಗಿದೆ ಎನ್ನುತ್ತಾರೆ. ನನ್ನ ಅರ್ಜಿಯಲ್ಲಿ ಸಿ.ಡಿ.ಪಿ.ಓ ರವರು ಯಾವ ದಿನಾಂಕ

ಏನು ಆದೇಶ ಮಾಡಿರುತ್ತಾರೆಂದು ಬರೆಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ಕೇಸ್ ನಲ್ಲಿ ನಮ್ಮ ವಕೀಲರು ಏನು ಬರೆಸಿ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

ನಮ್ಮ ಯಜಮಾನರ ಸಾವಿಗೆ 2 ನೇ ಎದುರುದಾರರು ಕಾರಣ ಎಂದು ತೋರಿಸಲು ಪಿ.ಎಂ. ವರದಿ ಹಾಕಿಲ್ಲ ಪೋಸ್ಟ ಮಾಟಂ ಮಾಡಿಸಿಲ್ಲ ಎನ್ನುತ್ತಾರೆ. 2 ನೇ ಎದುರುದಾರರ ಕಿರುಕುಳದಿಂದ ನನ್ನ ಗಂಡ ಸತ್ತಿರುತ್ತಾರೆ ಎಂದು ಯಾವುದೆ ದಾಖಲೆ ಇಲ್ಲ. ಯಾವ ದಾಖಲೆಗಳ ಅಧಾರದ ಮೇಲೆ ನನ್ನ ಗಂಡನ ಸಾವಿಗೆ 2 ನೇ ಎದುರುದಾರರು ಕಾರಣ ಎಂದು ಹೇಳುತ್ತಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ಅವರ ಚಿಕಿತ್ಸೆಗಾಗಿ ಹಣಕಾಸಿನ ವ್ಯವಸ್ಥೆ ಮಾಡಿ ಕೊಡದ ಕಾರಣ ಮೃತರಾಗಿರತ್ತಾರೆ ಎಂದು ನುಡಿಯುತ್ತಾರೆ. 2 ನೇ ಎದುರುದಾರರ ಮೇಲೆ ಮಾನ ಹಾನಿ ಪದಗಳನ್ನು ಬಳಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಸಾವಿಗೆ 2 ನೇ ಎದುರುದಾರರು ಕಾರಣ ಕರ್ತರು ಎಂದು ತೋರಿಸಲು ದಾಖಲೆ ಇರುವುದಿಲ್ಲ. ಅಂತಹ ಪದಗಳನ್ನು ಬಳಸಿದ ಕಾರಣ ನನ್ನ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಲು 2 ನೇ ಎದುರುದಾರರು ಹಕ್ಕುಳ್ಳವರಾಗಿರುತ್ತಾರೆ ಎಂದರೆ ಸರಿ.

ನನ್ನ ಗಂಡ ಮೂತ್ರಪಿಂಡ ವೈಫಲ್ಯದಿಂದ ಮರಣ ಹೊಂದಿರುತ್ತಾರೆ ಎಂದರೆ 2 ಕಾರಣಗಳಿಂದ ಮರಣ ಹೊಂದಿರುತ್ತಾರೆ ಎನ್ನುತ್ತಾರೆ. ಹೃದಯ ಸಂಬಂಧಿ ಕಾಯಿಲೆ ಮತ್ತು ಕಿಡ್ನಿ ವೈಫಲ್ಯದಿಂದ ಮರಣ ಹೊಂದಿರುತ್ತಾರೆ. ನನ್ನ ಗಂಡನ ಸಾವಿಗೆ ಎರಡೂ ಕಾರಣಗಳು ಸಹಜವಾದ ಮತ್ತು ನೇರವಾದ ಕಾರಣಗಳು ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ಬರೆಸಿರುವ ಅಂಶಗಳು ಸತ್ಯವಾಗಿರುತ್ತದೆ. ಆ ಎರಡೂ ಕಾರಣಗಳ ಜೊತೆ ಬೇರೆ ಕಾರಣಗಳು ಇರುತ್ತವೆ. ಗಂಡನಿಗೆ ಅಣ್ಣಂದಿರ ಮಾನಸಿಕ ಟಾರ್ಚರ್ ಇತ್ತು. ನನ್ನ ಗಂಡ ವೈದ್ಯರ ಹತ್ತಿರ ತನ್ನ ಮನಸ್ಥಿತಿ, ಆರೋಗ್ಯ ಸ್ಥಿತಿಗೆ ಸಹೋದರು ಕಾರಣ ಎಂದು ವೈದ್ಯರಲ್ಲಿ ಹೇಳಿರಬಹುದು. ಹಾಗೆ ಹೇಳಿರುವುದನ್ನು ನಾನು ಸ್ವತಃ ಕೇಳಿಲ್ಲ ಮತ್ತು ನೋಡಿಲ್ಲ. ತನ್ನ ಕಾಯಿಲೆಗೆ ನನ್ನ ಗಂಡ ತನ್ನ ಸಹೋದರು ಕಾರಣ ಎಂದು ದೂರು ಕೊಟ್ಟಿಲ್ಲ. ನನ್ನ ಗಂಡ ಎಲ್ಲಿಯೂ ತನ್ನ ಅಂಗ ವೈಫಲ್ಯಕ್ಕೆ ತನ್ನ ಸಹೋದರರೆ ಕಾರಣ ಎಂದು ಎಲ್ಲಿಯೂ ಪ್ರಸ್ತಾಪ ಮಾಡಿಲ್ಲದ ಕಾರಣ ನಾನು ಹೇಳುತ್ತಿರುವುದೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ನಾನು ಅಧಾರ ರಹಿತ ಆರೋಪ

ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡ ಮರಣ ಹೊಂದಿದ ದಿನ ಅವರ ಸಾವಿಗೆ 2 ನೇ ಎದುರುದಾರರೆ ಕಾರಣ ಎಂದು ದೂರು ಕೊಟ್ಟಿಲ್ಲ. ಆ ರೀತಿ ದೂರು ಕೊಡುವ ಸಾಮಾನ್ಯ ಜ್ಞಾನ ನನಗೆ ಇದೆ ಎಂದರೆ ಸರಿ. ಆಗ ಮನಸ್ಥಿತಿ ಸರಿ ಇಲ್ಲದ ಕಾರಣ ದೂರು ಕೊಟ್ಟಿಲ್ಲ ಎನ್ನುತ್ತಾರೆ. ನನ್ನ ಗಂಡನ ನೈಜ ಸಾವಿನ ಕಾರಣ ಕಿಡ್ನಿ ವೈಫಲ್ಯ ಮತ್ತು ಹೃದಯ ಸಮಸ್ಯೆ ಎಂದರೆ ಸರಿಯಲ್ಲ. ಈ ಕೇಸ್ ನಲ್ಲಿ ನನ್ನ ಗಂಡನ ಸಾವಿಗೆ 2 ನೇ ಎದುರುದಾರರ ಕೊಟ್ಟ ಕಿರುಕುಳದಿಂದ ಎಂದು ಬರೆಸಿಲ್ಲ. ನಮ್ಮ ಮನೆಯಲ್ಲಿ ಇತರೆ ಸದಸ್ಯರು ದೂರನ್ನು ಕೊಡುವ ಪ್ರಯತ್ನ ಮಾಡಿಲ್ಲ.

6 ನೇ ಪ್ಯಾರಾದಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ದೀ 24.07.2019 ರಂದು ನನ್ನ ಗಂಡ ಮರಣ ಹೊಂದಿರುತ್ತಾರೆ, ಅವರ ಮರಣ ಹೊಂದುವ ಕೆಲವು ದಿನಗಳ ಹಿಂದೆ 2 ನೇ ಎದುರುದಾರರು ಮಾನಸಿಕ ಹಿಂಸೆ ಕೊಟ್ಟಿದ್ದರು ಎಂಬ ಬಗ್ಗೆ ಎನ್.ಸಿ.ಆರ್ ದಾಖಲೆ ಹಾಜರು ಪಡಿಸಿರುತ್ತೇನೆ.ಅಂತಹ ದಾಖಲೆ ನಿಪಿ.8 ಆಗಿರುತ್ತದೆ. ನಿಪಿ. 8 ರ ದಾಖಲೆಯಲ್ಲಿ ಹಿಸ್ಟ್ರೀ ಅಫ್ ಅಜಾಲ್ಟ್ history of assault unknown person ಎಂದು ಇರುತ್ತದೆ ಎಂದರೆ ಆ ದಾಖಲೆಯಲ್ಲಿ ಇರುತ್ತದೆ ಆ ದಿನ ನಾನು ಹೇಳುವ ರೀತಿಯಲ್ಲಿ ಇರಲಿಲ್ಲ ಎನ್ನುತ್ತಾರೆ. ಅದನ್ನು ನಾನೇ ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಹಾಗಾದರೆ ವೈದ್ಯರು ಬರೆದಿರುವುದು ಸುಳ್ಳು ಇದೆಯಾ ಎಂದರೆ ಸುಳ್ಳು. ನನ್ನ ಪರವಾಗಿ ವೈದ್ಯರನ್ನು ಕರಸಿ ವಿಚಾರಣಾ ಮಾಡಿಸಲು ನನ್ನದೇನು ತೊಂದರೆ ಇಲ್ಲ. ಯಾವುದೆ ಗಲಾಟೆ ಮಾಡದಿದ್ದರೂ ಸುಳ್ಳು ಕಥೆಯನ್ನು ಕಟ್ಟುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.